# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಮಧು ಜಿ ಮಾದೇಗೌಡ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 21 (24) |
| ಉತ್ತರಿಸಬೇಕಾದ ದಿನಾಂಕ | 27.01.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಒಟ್ಟು ವಿಸ್ತೀರ್ಣ ಎಷ್ಟು; ಈ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು (ಗ್ರಾಮಗಳು ಒಳಗೊಂಡಂತೆ) ಯಾವುವು; (ಸಂಪೂರ್ಣ ವಿವರ ನೀಡುವುದು); | ಮಂಡ್ಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 9986.30 ಹೆಕ್ಟೇರ್.<br><br>ಈ ವ್ಯಾಪ್ತಿಗೆ ಒಳಪಡುವ ಪ್ರದೇಶಗಳ ವಿವರಗಳನ್ನು **ಅನುಬಂಧ**ದಲ್ಲಿರಿಸಿದೆ. |
| ಆ) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಈವರೆವಿಗೂ ಅಭಿವೃದ್ಧಿಪಡಿಸಿರುವ ವಸತಿ ಯೋಜನೆಗಳು ಯಾವುವು; (ವಸತಿ ಯೋಜನೆ ಆರಂಭಿಸಿದ ವರ್ಷ ಕೈಗೊಂಡ ಅಭಿವೃದ್ಧಿ ಕೆಲಸಗಳು, ವ್ಯಯಿಸಿದ ಮೊತ್ತ ಒಳಗೊಂಡಂತೆ (ಸಂಪೂರ್ಣ ಮಾಹಿತಿ ನೀಡುವುದು); | 1. ಸಾಹುಕಾರ್ ಚನ್ನಯ್ಯ ಬಡಾವಣೆಯನ್ನು 1988 ರಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ. ಸದರಿ ಬಡಾವಣೆಯಲ್ಲಿ ಅಭಿವೃದ್ಧಿ ಕೆಲಸಗಳಾದ ರಸ್ತೆ ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಸಂಪರ್ಕ ಇತ್ಯಾದಿ ಮೂಲಭೂತ ಸೌಕರ್ಯಗಳು ಪೂರ್ಣಗೊಂಡಿರುತ್ತದೆ. ಸದರಿ ಯೋಜನೆಗೆ ವ್ಯಯಿಸಿದ ಮೊತ್ತ ರೂ.12,81,000/- ಗಳಾಗಿರುತ್ತದೆ.<br><br>2. ಸಾತನೂರು ಬಡಾವಣೆಯನ್ನು 1999 ರಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ. ಸದರಿ ಬಡಾವಣೆಯಲ್ಲಿ ಅಭಿವೃದ್ಧಿ ಕೆಲಸಗಳಾದ ರಸ್ತೆ ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಸಂಪರ್ಕ ಇತ್ಯಾದಿ ಮೂಲಭೂತ ಸೌಕರ್ಯಗಳು ಪ್ರಗತಿ ಹಂತದಲ್ಲಿರುತ್ತದೆ. ಸದರಿ ಯೋಜನೆಗೆ ವ್ಯಯಿಸಿದ ಮೊತ್ತ ರೂ.1,18,77,000/- ಗಳಾಗಿರುತ್ತದೆ.<br><br>3. ವಿವೇಕಾನಂದ ಬಡಾವಣೆಯನ್ನು 1998 ರಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ. ಸದರಿ ಬಡಾವಣೆಯಲ್ಲಿ ಅಭಿವೃದ್ಧಿ ಕೆಲಸಗಳಾದ ರಸ್ತೆ ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಸಂಪರ್ಕ ಇತ್ಯಾದಿ |

| | | |
|---|---|---|
| | | ಮೂಲಭೂತ ಸೌಕರ್ಯಗಳು ಪ್ರಗತಿ ಹಂತದಲ್ಲಿರುತ್ತದೆ, ಸದರಿ ಯೋಜನೆಗೆ ವ್ಯಯಿಸಿದ ಮೊತ್ತ ರೂ.26,84,00,000/- ಗಳಾಗಿರುತ್ತದೆ. |
| ಇ) | ಈ ವಸತಿ ಯೋಜನೆಗಳನ್ನು ನಗರಸಭೆಗೆ ಹಸ್ತಾಂತರ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು; (ವಸತಿ ಯೋಜನೆವಾರು ಮಾಹಿತಿ ನೀಡುವುದು); | 1. ಸಾಹುಕಾರ್ ಚನ್ನಯ್ಯ ಬಡಾವಣೆಯನ್ನು ನಗರಸಭೆಗೆ ಹಸ್ತಾಂತರಿಸುವ ಪ್ರಕ್ರಿಯೆ ಪ್ರಾರಂಭಿಸಿದಾಗ ನಗರಸಭೆಯಿಂದ ನಿರ್ವಹಣಾ ವೆಚ್ಚವನ್ನು ಪಾವತಿಸಲು ಕೋರಿದ್ದರಿಂದ, ಪಾವತಿ ವೆಚ್ಚವನ್ನು ಪಾವತಿಸದ ಕಾರಣ ಹಸ್ತಾಂತರಿಸುವ ಪ್ರಕ್ರಿಯೆಯು ವಿಳಂಬವಾಗಿದ್ದು, ಪ್ರಸ್ತುತ ಸದರಿ ಬಡಾವಣೆಯ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ನಗರಸಭೆಗೆ ಹಸ್ತಾಂತರಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br><br>2. 1990 ರಲ್ಲಿ ಸಾತನೂರು ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡುವ ಸಂದರ್ಭದಲ್ಲಿ ರಸ್ತೆ, ವಿದ್ಯುತ್, ಡ್ರೈನೇಜ್, ಮುಂತಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಹಂಚಿಕೆ ಮಾಡಲಾಗಿತ್ತು. ಆದರೆ ಸದರಿ ಬಡಾವಣೆಯು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿಲ್ಲದಿರುವುದರಿಂದ ಹಸ್ತಾಂತರಿಸುವ ಪ್ರಕ್ರಿಯೆ ಕೈಗೊಂಡಿರುವುದಿಲ್ಲ.<br><br>3. ವಿವೇಕಾನಂದ ನಗರ ಬಡಾವಣೆಯು ಸಿ.ಬಿ.ಐ ತನಿಖೆ ಹಂತದಲ್ಲಿ ಇರುವುದರಿಂದ ಹಸ್ತಾಂತರಿಸುವ ಪ್ರಕ್ರಿಯೆ ಕೈಗೊಂಡಿರುವುದಿಲ್ಲ. |
| ಈ) | ಪ್ರಾಧಿಕಾರದ ವತಿಯಿಂದ ಹೊಸ ವಸತಿ ಯೋಜನೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆಯೇ (ವಿವರ ನೀಡುವುದು) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ: 14.06.2024ರಂದು ಸಾರ್ವಜನಿಕ ಪ್ರಕಟಣೆ ಸಂಖ್ಯೆ ಮಂನಪ್ರಾ / ಸಾರ್ವಜನಿಕ ಪ್ರಕಟಣೆ / 2022-23 ರಲ್ಲಿ ಸಾರ್ವಜನಿಕ ಸಹಭಾಗಿತ್ವದೊಂದಿಗೆ ಶೇಕಡ 50:50 ಅನುಪಾತದಲ್ಲಿ ವಸತಿ ಯೋಜನೆ ರೂಪಿಸಲು ಭೂ ಮಾಲೀಕರು ಪ್ರಾಧಿಕಾರದೊಂದಿಗೆ ಕೈ ಜೋಡಿಸುವಂತೆ ಈ ಕುರಿತು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯನ್ನು ಸಂಪರ್ಕಿಸುವಂತೆ ಸಾರ್ವಜನಿಕ ಪ್ರಕಟಣೆ ನೀಡಲಾಗಿರುತ್ತದೆ.<br><br>ಪ್ರಾಧಿಕಾರದಿಂದ ಬಡಾವಣೆ ಅಭಿವೃದ್ಧಿಪಡಿಸಲು ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ಒದಗಿಸುವಂತೆ ದಿನಾಂಕ: 11.09.2025ರಂದು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರನ್ನು ಕೋರಲಾಗಿದೆ. |

| | | |
|---|---|---|
| ಉ) | ಪ್ರಾಧಿಕಾರದ ಮುಖ್ಯ ಉದ್ದೇಶ ಮತ್ತು<br>ಕಾರ್ಯಚಟುವಟಿಕೆಗಳೇನು? | ಸ್ಥಳೀಯ ಯೋಜನಾ ಪ್ರದೇಶದಲ್ಲಿ ಮಹಾಯೋಜನೆಯನ್ನು ತಯಾರಿಸಿ. ಬೆಳವಣಿಗೆಯನ್ನು ಯೋಜನಾಬದ್ಧವಾಗಿ ನಿಯಂತ್ರಿಸುವುದು ಹಾಗೂ ಅಭಿವೃದ್ಧಿ ಯೋಜನೆಗಳ ಮೂಲಕ ನಿವೇಶನ ರಹಿತರಿಗೆ ನಿವೇಶನಗಳನ್ನು ಹಂಚುವುದು. |

**ಸಂಖ್ಯೆ :ನಅಇ 28 ಮೈಅಪ್ರಾ 2026(ಇ)**

**(ಬಿ.ಎಸ್ ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಅನುಬಂಧ

# ಮಂಡ್ಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳ ವಿವರ

| ಕ್ರ.ಸಂ | ಗ್ರಾಮ ಪಂಚಾಯಿತಿ | ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು |
|---|---|---|
| 1 | ನಗರಸಭೆ | ಮಂಡ್ಯ, ಹಾಲಹಳ್ಳಿ, ಕ್ಯಾತಂಗೆರೆ, ಕಿರಗಂದೂರು, ಗುತ್ತಲು |
| 2 | ಬೇಲೂರು | ಗುತ್ತಲು |
| 3 | ಹಳುವಾಡಿ | ಹಾಲಹಳ್ಳಿ |
| 4 | ಸಂತೆಕಸಲಗೆರೆ | ಕಾರಸವಾಡಿ, ಸಂತೆಕಸಲಗೆರೆ |
| 5 | ಬೇವಿನಹಳ್ಳಿ | ಕ್ಯಾತಂಗೆರೆ, ಮನುಗನಹಳ್ಳಿ ಮತ್ತು ಬೇವಿನಹಳ್ಳಿ. |
| 6 | ಇಂಡುವಾಳು | ಕಿರಗಂದೂರು, ಇಂಡುವಾಳು |
| 7 | ಹೊಳಲು | ಹೊಳಲು |
| 8 | ಹೆಚ್.ಮಲ್ಲಿಗೆರೆ | ಬಿ. ಹೊಸಹಳ್ಳಿ, ಬೀರಗೌಡನಹಳ್ಳಿ |
| 9 | ಮಂಡ್ಯ | ಪಣಕನಹಳ್ಳಿ, ಕೋಣನಹಳ್ಳಿ, ಚಿಕ್ಕಮಂಡ್ಯ |
| 10 | ಗೋಪಾಲಪುರ | ಹೆಚ್.ಕೋಡಿಹಳ್ಳಿ, ಗೋಪಾಲಪುರ |
| 11 | ಸಾತನೂರು | ಕೊಮ್ಮೇರಹಳ್ಳಿ ಮತ್ತು ಸಾತನೂರು |
| 12 | ಉಮ್ಮಡಹಳ್ಳಿ | ಉಮ್ಮಡಹಳ್ಳಿ |
| 13 | ಸೂನಗನಹಳ್ಳಿ | ಭೂತನಹೊಸೂರು |

ಆಯುಕ್ತರು,
ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ,
ಮಂಡ್ಯ.